ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಸಿಸಿಟೆಕ್/2019-20/1147

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:25-09-2019

## -: ಸುತ್ತೋಲೆ :-

ವಿಷಯ:- ಸಿಸಿಟೆಕ್ ಕೇಂದ್ರ ಘಟಕಕ್ಕೆ ಸಲ್ಲಿಸುವ ಶೇ.25ರ ಲಾಭಾಂಶದ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಸಂಸ್ಥೆಯ ಸಿಸಿಟೆಕ್ ಉಪಘಟಕದ ವತಿಯಿಂದ ಹಿಂದಿನ ಹಾಗೂ ಪ್ರಸ್ತುತ ಸಾಲಿನಲ್ಲಿ ನಿರ್ದೇಶನಾಲಯದಿಂದ ಅನುಮೋದನೆ ಪಡೆದು ಆಯೋಜಿಸಿರುವ ಅಲ್ಪಾವಧಿ ತರಬೇತಿ/ಇತರೆ ಕಾರ್ಯಕ್ರಮಗಳಿಂದ ಬಂದಿರುವ ಲಾಭಾಂಶದಲ್ಲಿ ಕೇಂದ್ರ ಘಟಕಕ್ಕೆ ಸಲ್ಲಿಸಬೇಕಾಗಿರುವ ಶೇ.25ರ ಲಾಭಾಂಶವನ್ನು ಕಾರ್ಯಕ್ರಮ ಮುಗಿದ ಒಂದು ತಿಂಗಳೊಳಗಾಗಿ ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ, ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿತ್ತು. ಆದರೂ ಸಹ ಕೆಲವು ಸಂಸ್ಥೆಗಳಿಂದ ಅನುಮೋದಿತ ತರಬೇತಿಯ ಬಾಬ್ತು ಇಲ್ಲಿಯವರೆಗೂ ಸಂದಾಯವಾಗಿರುವುದಿಲ್ಲ. ಆದ ಕಾರಣ ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರು ಹಿಂದಿನ ಹಾಗೂ ಪ್ರಸ್ತುತ ಸಾಲಿನ ಶೇ.25ರ ಲಾಭಾಂಶವನ್ನು ಕೂಡಲೆ ಈ ಕಛೇರಿಗೆ ಸಂದಾಯಮಾಡಲು ಕ್ರಮವಹಿಸುವುದು ಹಾಗೂ ಒಂದು ವೇಳೆ ಸಂದಾಯಮಾಡಿದ್ದಲ್ಲಿ ಮಾಹಿತಿ ವಿವರ ಸಲ್ಲಿಸುವುದು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಿಸಿಟೆಕ್ ವತಿಯಿಂದ ಆಯೋಜಿಸುವ ಯಾವುದೇ ರೀತಿಯ ತರಬೇತಿಗೆ ಅನುಮೋದನೆ ನೀಡಲಾಗುವುದಿಲ್ಲವೆಂದು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ. ತಾಂ.ಶಿ.ನಿ. ಬೆಂಗಳೂರು. ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.